# ಚಾಣಕ್ಯನ ರಣತಂತ್ರ ಚಾತುರ್ಯ





ಸಿ. ಎಸ್. ಶಾಸ್ತ್ರೀ
ಇತಿಹಾಸ ತಜ್ಞ

ಪ್ರಾಚೀನ ಭಾರತದ ಇತಿಹಾಸದಲ್ಲಿ ಚಾಣಕ್ಯನ ಚಾಣಾಕ್ಷತನವನ್ನು ಅರಿಯದವರಿಲ್ಲ. ಬುದ್ಧಿವಂತಿಕೆ, ಕುಟಿಲನೀತಿ, ಚಾತುರ್ಯ, ವೈದಿಕ ವಿದ್ವತ್ತು ಮೊದಲಾದವುಗಳಿಗೆ ಚತುರಮತಿಯಾದ ಚಾಣಕ್ಯನನ್ನು ಬಿಟ್ಟರೆ ಅಂದು ಬೇರೊಬ್ಬನಿರಲಿಲ್ಲ. ತಂತ್ರಗಾರಿಕೆ ಬಂದಾಗಲೆಲ್ಲಾ ಚಾಣಕ್ಯನ ಹೆಸರು ನೆನಪಾಗುವುದು. ಇದನ್ನು ದಾಖಲೆ ಸಮೇತ ನಮಗೆ ಮನವರಿಕೆ ಮಾಡುವುದೇ 'ಅರ್ಥಶಾಸ್ತ್ರ'. 'ಅರ್ಥಶಾಸ್ತ್ರ' ಕೌಟಿಲ್ಯನ ಹೆಸರಿನೊಂದಿಗೆ ಹಾಸುಹೊಕ್ಕಾಗಿದೆ. ಅದರ ಕರ್ತೃ ಕೌಟಿಲ್ಯನೆಂಬುವುದರಲ್ಲಿ ಸಂಶಯವಿಲ್ಲ. 1905 ರಲ್ಲಿ ಡಾ. ಆರ್.ಶಾಮಶಾಸ್ತ್ರೀಯವರಿಗೆ ಅರ್ಥಶಾಸ್ತ್ರ ಗ್ರಂಥದ ಒಂದು ಪ್ರತಿ ಮೈಸೂರಿನಲ್ಲಿ ದೊರಕಿತ್ತು . ಆಮೇಲೆ ಅದರ ವಿಶೇಷ ಅಧ್ಯಯನವಾಯಿತು. ಅದರ ಕರ್ತೃವಾದ ಕೌಟಿಲ್ಯನನ್ನೇ ಚಾಣಕ್ಯ ಅಥವಾ ವಿಷ್ಣುಗುಪ್ತ ಎಂದು ಹೇಳಲಾಗುತ್ತದೆ. ಕೌಟಿಲ್ಯ-ಚಾಣಕ್ಯ-ವಿಷ್ಣುಗುಪ್ತ ಈ ಮೂರೂ ಹೆಸರುಗಳು ಒಬ್ಬ ವ್ಯಕ್ತಿಗೇ ಇದ್ದಿರಬೇಕೆಂದು ಹಲವು ವಿದ್ವಾಂಸರು ತೀರ್ಮಾನಿಸಿದ್ದಾರೆ. ಚಾಣಕ್ಯ ತಕ್ಷಶಿಲಾದ ಮಹಾ ವಿದ್ವಾಂಸನಾದ ಬ್ರಾಹ್ಮಣ. ಅವನನ್ನು ಮಗಧದ ನಂದ ವಂಶದ ರಾಜ (ಧನನಂದ) ಅವಮಾನಿಸಿದ್ದಕ್ಕಾಗಿ ಅವನು ಚಂದ್ರಗುಪ್ತ ಮೌರ್ಯನ ಮೂಲಕ ನಂದಾಡ್ನಂತವನ್ನು ನಿಗ್ರಹಿಸಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಗೆ ಕಾರಣನಾದನೆಂದು ಹೇಳಲಾಗಿದೆ. ಅದೇನಿದ್ದರೂ, ಅರ್ಥಶಾಸ್ತ್ರ ಮಾತ್ರ ಪ್ರಾಚೀನ ಭಾರತದ ಮಹಾಗ್ರಂಥಗಳ ಸಾಲಿಗೆ ಸೇರುವುದರಲ್ಲಿ ಸಂಶಯವಿಲ್ಲ. ಆದರೆ, ಆ ಕೃತಿಯ ಕಾಲದ ಬಗ್ಗೆ ಗೊಂದಲವಿದೆ. ಸಾಮಾನ್ಯವಾಗಿ ತಿಳಿಯುವಂತೆ, ಆಧುನಿಕ ಪೂರ್ವಕಾಲ 321-296 ರಲ್ಲಿ ಅದರ ರಚನೆಯಾಗಿರಬೇಕೆಂಬ ಅಭಿಪ್ರಾಯವಿದೆ. ಅದೊಂದು ಧಾರ್ಮಿಕ, ರಾಜಕೀಯ, ವ್ಯಾವಹಾರಿಕ, ಆರ್ಥಿಕ ವಿಷಯಗಳನ್ನೊಳಗೊಂಡ ಅಪೂರ್ವ ಶಾಸ್ತ್ರೀಯ ಕೃತಿಯಾಗಿದೆ. ಅದು ವೈವಿಧ್ಯಮಯ ಆಯಾಮಗಳ ಇತಿಹಾಸದ ಆಕರವಾಗಿಯೂ ಪ್ರಸಿದ್ಧವಾಗಿದೆ. ಅದರ ಅಧ್ಯಯನ ಸುಲಭಸಾಧ್ಯವಲ್ಲ ಮತ್ತು ಅದನ್ನು ಬೇರೆ ಬೇರೆ ದೃಷ್ಟಿಕೋನದಿಂದ ಅಭ್ಯಾಸ ಮಾಡಬಹುದಾಗಿದೆ. ಈ ಲೇಖನದಲ್ಲಿ ಅರ್ಥಶಾಸ್ತ್ರದ ಆಧಾರದಲ್ಲಿಯ ಚಾಣಕ್ಯನ ರಣತಂತ್ರದ ಬಗ್ಗೆ ತಿಳಿಯುವ ಪ್ರಯತ್ನವಿದೆ. (Lieut. Col. Chandra B.Khanduri, "Chanukya's War Machine"-article) ಇದನ್ನು ಭಾಟಿಯಾ ಅವರ ಗ್ರಂಥದಲ್ಲಿ ಕಾಣಬಹುದು. (H.S.Bhatia, ed. "Political, Legal, And War Philosophy in Ancient India" Vol. II. 2012)

ಚಾಣಕ್ಯ ತಂತ್ರ ಕಾರ್ಯಸಾಧನೆಗಾಗಿ ಚತುರೋಪಾಯಗಳ ಬಳಕೆಯನ್ನು ಸೂಚಿಸುತ್ತದೆ. ಉತ್ತಮ ರಾಜ್ಯಾಡಳಿತ ಮೂಲಕ ಪ್ರಜಾಕ್ಷೇಮಾಭಿವೃದ್ಧಿಯ ಪ್ರಜಾಪರಿಪಾಲನೆ ಮಾಡುವುದೇ ರಾಜನಾದವನ ಕರ್ತವ್ಯವೆಂದು ಚಾಣಕ್ಯ ಸಾರಿದ್ದಾನೆ. ಆ ರೀತಿಯಾಗಿ ಆಡಳಿತ ನಡೆಸುವಾಗ ಯುದ್ಧಗಳೂ, ಸೈನಿಕ ಕಾರ್ಯಾಚರಣೆಗಳೂ ಸಾಮಾನ್ಯವಾಗಿರುತ್ತವೆ. ಯಾವತ್ತೂ ಯುದ್ಧಗಳು ಅಪೇಕ್ಷಣೀಯವಲ್ಲ. ಆದರೆ ಅನಿವಾರ್ಯವಾದರೆ, ವೈರಿಗಳ ನಾಶಮಾಡಿ ಯುದ್ಧದಲ್ಲಿ ಜಯಗಳಿಸಲೇಬೇಕು. ಅದಕ್ಕಾಗಿ ವಿವಿಧ ರಣತಂತ್ರಗಳನ್ನೂ, ಆಡಳಿತ ಧೋರಣೆಗಳನ್ನೂ ಅನುಸರಿಸಲು ಚಾಣಕ್ಯ ನೀತಿ ಮಾರ್ಗಸೂಚಿಯಾಗಿದೆ.

ನಂದರ ದುರಾಡಳಿತವನ್ನು ಕೊನೆಗಾಣಿಸಿ,